ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು)

ಅ) 1996-97ನೇ ಸಾಲಿನ ಅಯವ್ಯಯದಲ್ಲಿ ರೂ. 16.30 ಕೋಟಿಗಳನ್ನು ಗಂಗಾ ಕಲ್ಯಾಣ ಯೋಜನೆಗೆ ಒದಗಿಸಲಾಗಿದೆ. ಇದಲ್ಲದೆ, ರೂ. 17.88 ಕೋಟಿಗಳನ್ನು ವಿಶೇಷ ಘಟಕ ಯೋಜನೆ ಗಿರಿಜನ ಉಪಯೋಜನೆಯಡಿಯಲ್ಲಿ ಒಟ್ಟುಗೂಡಿಸಿದ ಮೊತ್ತದಿಂದ ಈ ಯೋಜನೆಗೆ ಒದಗಿಸಲಾಗಿದೆ. ಹಾಗೂ ಕೇಂದ್ರ ಸರ್ಕಾರದಿಂದ ಪಡೆದ ವಿಶೇಷ ಕೇಂದ್ರೀಯ ನೆರವಿನಿಂದ ರೂ. 106.28 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. 1996-97ನೇ ಸಾಲಿನಲ್ಲಿ ಒಟ್ಟು 15070 ಫಲಾನುಭವಿಗಳಿಗೆ ಅನುಕೂಲ ಕಲ್ಪಿಸಲು ಉದ್ದೇಶಿಸಿದ್ದು, ಇದುವರೆವಿಗೂ 8819 ಫಲಾನುಭವಿಗಳನ್ನು ಈ ಯೋಜನೆಯಡಿ ತರಲಾಗಿದೆ ಮತ್ತು ಜನವರಿ 1997ರ ಅಂತ್ಯದವರೆಗೆ 1591.07 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಆ) ಗಂಗಾ ಕಲ್ಯಾಣ ಯೋಜನೆಗೆ ಸಂಬಂಧಿಸಿದಂತೆ ಒಂದು ಬಾವಿಯಿಂದ ಮತ್ತೊಂದು ಬಾವಿಗೆ ಕನಿಷ್ಟ ಅಂತರ ಇರಬೇಕೆಂಬ ಷರತ್ತನ್ನು ಸಡಿಲಗೊಳಿಸಲಾಗಿದೆ.

ಇ) ಎರಡನೇ ಪ್ರಶ್ನೆಗೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಯಚೂರು ಜಿಲ್ಲೆಯ ಮುದಗಲ್ ಪುರಸಭೆಯಿಂದ ನಿವೇಶನಗಳನ್ನು ಮಾರಾಟ ಮಾಡುವ ನಿರ್ಣಯ

486 (927) ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯ ಮುದಗಲ್ ಪುರಸಭೆಯ ಆಗಸ್ಟ್ 1996ನೇ ತಿಂಗಳಿನ ಸಭೆಯಲ್ಲಿ ಪುರಸಭೆ ಅಧೀನದಲ್ಲಿದ್ದ ನಿವೇಶನಗಳನ್ನು ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡಲು ತೆಗೆದುಕೊಂಡ ನಿರ್ಣಯವನ್ನು ಇಲಾಖಾಧಿಕಾರಿಗಳಿಂದ ತಿರಸ್ಕರಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಜಿಲ್ಲಾಧಿಕಾರಿಗಳ ಆದೇಶವನ್ನು ನಿರ್ಲಕ್ಷಿಸಿರುವ ಮುಖ್ಯಾಧಿಕಾರಿ ಮತ್ತು ಅಧ್ಯಕ್ಷರ ಮೇಲೆ ಕಾನೂನು ಕ್ರಮ ಕೈಗೊಳ್ಳದಿರಲು ಕಾರಣಗಳೇನು

ಶ್ರೀ ಮೆರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಮಂತ್ರಿಗಳು)

ಅ) ಹೌದು ತಿರಸ್ಕರಿಸಿದೆ.

ಆ) ಜಿಲ್ಲಾಧಿಕಾರಿಗಳ ಆದೇಶವನ್ನು ನಿರ್ಲಕ್ಷಿಸಲಾಗಿಲ್ಲ. ಕೌನ್ಸಿಲ್ ನಿರ್ಣಯದ ಮೇಲೆ ತೆಗೆದುಕೊಂಡ ಕಾರ್ಯಗಳನ್ನು ಜಿಲ್ಲಾಧಿಕಾರಿಗಳು ಸ್ಥಗಿತಗೊಳಿಸಿರುತ್ತಾರೆ.

ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ಹಣ

488 (931) ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು):– ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುರವೆ?

ಅ) 1996-97ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ವಿಶೇಷ ಹಣ ಮಂಜೂರು ಮಾಡಿ, ಬಿಡುಗಡೆ ಮಾಡಿದ್ದರೂ ರಾಜ್ಯ ಸರ್ಕಾರ ಇಂದಿಗೂ ಒಂದು ಪೈಸೆಯನ್ನು ಬಳಸಿಕೊಂಡಿಲ್ಲದಿರುವ ಕಾರಣಗಳೇನು?

ಆ) ಯಾವ ಉದ್ದೇಶಗಳಿಗೆ ಈ ಹಣವನ್ನು ವಿನಯೋಗಿಸಲು ಸೂಚಿಸಲಾಗಿದೆ?

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸಚಿವರು)

ಅ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಗೆ ಕೇಂದ್ರ ಸರ್ಕಾರದಿಂದ ಯಾವುದೇ ವಿಶೇಷ ಹಣ ಬಿಡುಗಡೆಯಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಚಿಕ್ಕ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಯೋಜನೆಯ ಅನುಷ್ಠಾನ

489 (930) ಶ್ರೀ ಕೆ. ವಿರೂಪಾಕ್ಷಪ್ಪ (ಏಂಧನೂರು):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ನಗರ ಸಭೆ, ಪುರಸಭೆಗಳಿಗೆ ಕೇಂದ್ರ ಯೋಜನೆಯಾಗಿರುವ ಚಿಕ್ಕ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಸೇರ್ಪಡೆಯಾಗಿವೆ?

ಆ) ಈ ಸಮಗ್ರ ಅಭಿವೃದ್ಧಿ ಯೋಜನೆಗೆ ಬಿಡುಗಡೆ ಮಾಡಿರುವ ಹಣವೆಷ್ಟು? ಈ ಸಂಬಂಧ ಬಿಡುಗಡೆಯಾಗಿರುವ ಹಣವೆಷ್ಟು?

ಇ) ಯಾವ ಯಾವ ಕೆಲಸಗಳಿಗೆ ಎಷ್ಟು ಎಷ್ಟು ಹಣವನ್ನು ವಿನಿಯೋಗಿಸಲಾಗಿದೆ?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು)

ಅ) ಅನುಬಂಧದಲ್ಲಿ ಸೂಚಿಸಿರುವ 24 ನಗರಸಭೆಗಳು ಹಾಗೂ 45 ಪುರಸಭೆಗಳು ಈ ಯೋಜನೆಯಡಿ ಸೇರ್ಪಡೆಯಾಗಿವೆ.

ಆ) ಬಿಡುಗಡೆಯಾದ ಹಣ ರೂ. 3722.40 ಲಕ್ಷಗಳು.

ಇ) ಕೆಲಸಗಳಿಗೆ ವಿನಿಯೋಗಿಸಲಾದ ಹಣದ ವಿವರ ಈ ಕೆಳಕಂಡಂತಿದೆ:

ಕಾಮಗಾರಿಯ ಹೆಸರು	ವಿನಿಯೋಗಿಸಲಾದ ಹಣ (ಲಕ್ಷ ರೂ. ಗಳಲ್ಲಿ)
1. ಭೂಸ್ವಾಧೀನ ಮತ್ತು ಅಭಿವೃದ್ಧಿ	372.94
2. ನಿವೇಶನ ಮತ್ತು ಸೇವೆ	340.65